

# ಮರದ ಅರಮನೆಗೆ ನಿಸರ್ಗದ ಪ್ರಭಾವಳಿ

ತಮಿಳುನಾಡಿನಲ್ಲಿರುವ 'ಪದ್ಮನಾಭಪುರಂ ಅರಮನೆ'ಯ ಸ್ವಾಮ್ಯ ಹಾಗೂ ನಿರ್ವಹಣೆ ಕೇರಳ ಸರ್ಕಾರಕ್ಕೆ ಸಂಬಂಧಿಸಿದ್ದು. ಈ ಅರಮನೆಯ ಒಳಹೊಕ್ಕರೆ ಕಲಾಗಾರವೊಂದನ್ನು ಪ್ರವೇಶಿಸಿದಂತೆ ಭಾಸವಾಗುತ್ತದೆ.

**■ ಆದರ್ಶ ಬಿ.ಎಸ್.**

ಕನ್ಯಾಕುಮಾರಿಯ ಕಡಲ ತೀರದಲ್ಲಿ ಅಲೆಗಳೊಂದಿಗೆ ಮನದಣಿಯೆ ಆಡಿ ಮುಂದೆ ಸಾಗಿದರೂ ನಮ್ಮೆಲ್ಲರ ಮನಸ್ಸಿನಲ್ಲಿ ಅಲೆಗಳ ಸದ್ದು ಭೋರ್ಗರೆಯುತ್ತಿತ್ತು. ಕಣ್ಣುಗಳಲ್ಲಿ ಹಾಗೂ ಮನಸ್ಸಿನಲ್ಲಿ ಸೆರೆಯಾಗಿದ್ದ ಸೂರ್ಯೋದಯದ ಸೌಂದರ್ಯ ಇನ್ನೂ ಮಾಸಿರಲಿಲ್ಲ. ಬಿಸಿಲು ನೆತ್ತಿ ಏರುತ್ತಿದ್ದಂತೆ, ಇನ್ನಷ್ಟು ಸ್ಥಳಗಳನ್ನು ನೋಡುವ ಹಂಬಲ ಕ್ಷೀಣಿಸುತ್ತಿತ್ತು. ಕನ್ಯಾಕುಮಾರಿಗೆ ಸಮೀಪದ ತುಕ್ಕಲೇ ಎಂಬ ಪರಿಸರಕ್ಕೆ ಹೊಂದಿಕೊಂಡಂತಿದ್ದ ಯಾವುದೋ ಕಂಡು ಕೇಳರಿಯದ ಅರಮನೆಯನ್ನು ನೋಡಲು ಹೊರಟಿದ್ದರಿಂದ, ಅಷ್ಟೇನೂ ನಿರೀಕ್ಷೆಯೂ ಇರಲಿಲ್ಲ. ಎದುರಿಗಿದ್ದ ಅಂಗಡಿಯಲ್ಲಿ ಎಳನೀರು ಕುಡಿದು, ಅರಮನೆಯತ್ತ ಸಾಗಿದೆವು. ತಲಾ ನಲವತ್ತು ರೂಪಾಯಿ ಟಿಕೆಟ್.

ಪದ್ಮನಾಭಪುರಂ ಅರಮನೆ ನಮ್ಮ ಮೈಸೂರು ಅರಮನೆಯಂತೆ ಭವ್ಯವಾದುದಲ್ಲ. ಎದುರು ನಿಂತು ನೋಡಿದರೆ ಹಳೆಯ ಮನೆಯೊಂದರಂತೆ ಕಾಣಿಸುತ್ತದೆ. ಆದರೆ, ಆ ಕಟ್ಟಡದ ಹಿನ್ನೆಲೆಯಲ್ಲಿ ಹಬ್ಬಿರುವ ಪಶ್ಚಿಮ ಘಟ್ಟಗಳ ಸಾಲು ಇತಿಹಾಸದ ಕಥನಗಳನ್ನು ಪಿಸುಗುಡುವಂತೆ ಕಾಣಿಸುತ್ತವೆ ಹಾಗೂ ಅರಮನೆಗೆ ವಿಶಿಷ್ಟ ಪ್ರಭಾವಳಿ ಕಲ್ಪಿಸಿವೆ.

ಅರಮನೆಯ ಒಳಗೆ ಕಾಲಿಡುತ್ತಿದ್ದಂತೆ ಹೊಸಲೋಕವೊಂದು ತೆರೆದುಕೊಳ್ಳುತ್ತದೆ. ಸುಮಾರು ನಾಲ್ಕುನೂರು ವರ್ಷ ಹಳೆಯದಾದ ಈ ಅರಮನೆ, ಏಷ್ಯಾ ಖಂಡದಲ್ಲೇ ಅತಿದೊಡ್ಡ ಮರದ ಅರಮನೆಯೆಂಬ ಖ್ಯಾತಿಗೆ ಪಾತ್ರವಾಗಿದೆ. ನೆಲ ಮಹಡಿಯಲ್ಲಿ ಅಪಾರವಾದ ನಿಧಿಯಿದೆ ಎನ್ನಲಾಗಿದೆ.

